# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಕಟ್ಟಡ ಜಯಂತಿ ನಗರ ವೃತ್ತ ಹೊರಮಾವು/ಕಲ್ಕೆರೆ ಮುಖ್ಯರಸ್ತೆ,
ಹೊರಮಾವು ಗ್ರಾಮ, ಬೆಂಗಳೂರು- 560113

ಸಂಖ್ಯೆ.ಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/ /2021-22 ದಿನಾಂಕ: 18.10.2021

## ದಿನಾಂಕ-18.10.2021 ರಂದು ನಡೆದಿರುವ ವಿಜಿನಾಪುರ ವಾರ್ಡ್ ಸಂಖ್ಯೆ-51 ರ ವಾರ್ಡ್ ಸಮಿತಿ ಸಭೆ ನಡುವಳಿಗಳು

| | ಸದಸ್ಯರ ಹೆಸರು ಮತ್ತು ಪದನಾಮ | ಸದಸ್ಯರ ಹಾಜರು/ಗೈರು ಹಾಜರು |
|---|---|---|
| 1 | ಶ್ರೀಮತಿ.ತ್ರಿವೇಣಿ (ಅಧ್ಯಕ್ಷರು) | ಹಾಜರು |
| 2 | ಶ್ರೀ.ಪಾರ್ಥಸಾರಥಿ (ಸದಸ್ಯರು) | ಹಾಜರು |
| 3 | ಶ್ರೀ.ನಾಗಭೂಷಣ, ಸಹಾಯಕ ಅಭಿಯಂತರರು (ವಾರ್ಡ್ ನಂ.51) (ಕಾರ್ಯದರ್ಶಿ) | ಹಾಜರು |
| 4 | ಶ್ರೀ.ರಾಜು(ಸದಸ್ಯರು) | ಹಾಜರು |
| 5 | ಶ್ರೀ.ರಾಜಣ್ಣ (ಹಿ.ಆ.ಪ) ವಾರ್ಡ್ ನಂ.51 | ಹಾಜರು |
| 6 | ಶ್ರೀ.ಮಧು (ಕಿ.ಆ.ಪ) ವಾರ್ಡ್ ನಂ.51 | ಹಾಜರು |
| 7 | ಶ್ರೀ.ಮಂಜುನಾಥ ಬಡಿಗೇರ್ (ಕಂದಾಯ ಪರಿವೀಕ್ಷಕರು) | ಹಾಜರು |
| 8 | ಶ್ರೀ.ಮಹೇಂದ್ರ ಕುಮಾರ್ (ಸಲಹೆಗಾರರು, ಕಂದಾಯ ಇಲಾಖೆ ) | ಹಾಜರು |

ದಿನಾಂಕ-18.10.2021 ರಂದು ಪೂರ್ವಹ್ನ: 11.30 ಗಂಟೆ ಸಮಯದಲ್ಲಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯನದಾಗಿ ಶ್ರೀಮತಿ.ತ್ರಿವೇಣಿ ಅಧ್ಯಕ್ಷರು ರವರು ಸಭೆಯಲ್ಲಿ ಹಾಜರಿರುವ ಸದಸ್ಯರುಗಳು ಮತ್ತು ಅಧಿಕಾರಿ ವೃಂಧದವರಿಗೆಲ್ಲಾ ಸ್ವಾಗತಕೋರಿದರು. ತದನಂತರ ಈ ಕೆಳಕಂಡ ವಿಷಯಗಳ ಬಗ್ಗೆ ಈ ಸಭೆಯಲ್ಲಿ ಚರ್ಚಿಸಲಾಯಿತು.

1. ಶ್ರೀ.ಪಾರ್ಥಸಾರಥಿ (ಈಸ್ಟ್ ಆಫ್ ಎನ್.ಜಿ.ಇ.ಎಫ್ ಕ್ಷೇಮಾಭಿವೃದ್ಧಿ ಸಂಘ) ರವರು ಮಾತನಾಡಿ ವಿಜಿನಾಪುರ ವ್ಯಾಪ್ತಿಯಲ್ಲಿ ಈಸ್ಟ್ ಆಫ್ ಎನ್.ಜಿ.ಇ.ಎಫ್, ಯುಕೋ ಬ್ಯಾಂಕ್ ರಸ್ತೆ ಮತ್ತು ಬಿ.ಡಿ.ಎ ಬಡಾವಣೆಗಳಲ್ಲಿ ರಸ್ತೆಯಲ್ಲಿ ಗುಂಡಿಗಳು ಹೆಚ್ಚಾಗಿದ್ದು, ಸಾರ್ವಜನಿಕರಿಗೆ ಮತ್ತು ವಾಹನ ಸಂಚಾರಕ್ಕೆ ತೊಂದರೆಯುಂಟಾಗುತ್ತಿರುತ್ತದೆ. ತುರ್ತಾಗಿ ಕಾಮಗಾರಿ ಕೈಗೊಳ್ಳಲು ಕೋರಿರುತ್ತಾರೆ.

   **ಕ್ರಮ:-** ಸಹಾಯಕ ಅಭಿಯಂತರರು ವಿಜಿನಾಪುರ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

2. ಶ್ರೀ. ರಾಜು ರವರು ಮಾತನಾಡುತ್ತಾ, ವಿಜಿನಾಪುರ ವ್ಯಾಪ್ತಿಯ ಅಂಬೇಡ್ಕರ್ ನಗರ ಹಾಗೂ ಕೊತ್ತೂರು ರಸ್ತೆಯಲ್ಲಿ ಕಸದ ಸಮಸ್ಯೆ ಹೆಚ್ಚಾಗಿರುವುದರಿಂದ ಕಸವನ್ನು ತೆರವುಗೊಳಿಸಿಕೊಡಬೇಕೆಂದು ಸಭೆಯಲ್ಲಿ ಕೋರಿರುತ್ತಾರೆ.

   **ಕ್ರಮ:-** ಆರೋಗ್ಯ ನಿರೀಕ್ಷಕರು ವಿಜಿನಾಪುರ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

3. ವಿಜಿನಾಪುರ ವಾರ್ಡ್ ವ್ಯಾಪ್ತಿಯಲ್ಲಿ 2-3 ಗಂಟೆ ವಿದ್ಯತ್ ವ್ಯತ್ಯಯವಾಗುತ್ತಿದ್ದು, ವಿದ್ಯುತ್ ವ್ಯತ್ಯಯವಯವಾಗದಂತೆ ಕ್ರಮಕೈಗೊಳ್ಳಲು ಸಬೆಯಲ್ಲಿ ಸಾರ್ವಜನಿಕರು ಕೋರಿರುತ್ತಾರೆ.

**ಕ್ರಮ:-** ಸಹಾಯಕ ಅಭಿಯಂತರರು, ಬೆಸ್ಕಾಂ, ವಿಜಿನಾಪುರ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

Scanned with CamScanner

4. ಶ್ರೀ.ಅಂಬೇಡ್ಕರ್ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಾವೇರಿ ನೀರು ಸಮಯಕ್ಕೆ ಸರಿಯಾಗಿ ಪೂರೈಕೆಯಾಗುತ್ತಿರುವುದಿಲ್ಲ. ಆದುದರಿಂದ ಸಮಯಕ್ಕೆ ಸರಿಯಾಗಿ ಕಾವೇರಿ ನೀರನ್ನು ಪೂರೈಕೆ ಮಾಡಲು ಸಾರ್ವಜನಿಕರು ಕೋರಿರುತ್ತಾರೆ.
ಕ್ರಮ : ಸಭೆಯಲ್ಲಿ ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರ ಸಿಬ್ಬಂದಿಗೆ ಕ್ರಮ ವಹಿಸಲು ಸಭೆಯು ಸೂಚಿಸಿತು.

5. ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಅಧ್ಯಕ್ಷರು ರವರು ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯ ಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

Kanagathimang

ವಾರ್ಡ್ ಸಮಿತಿ ಕಾರ್ಯದರ್ಶಿಗಳು,
ವಾರ್ಡ್ ನಂ.51, ವಿಜಿನಾಪುರ

ಅಧ್ಯಕ್ಷರು, ವಾರ್ಡ್ ಕಮಿಟಿ
ವಾರ್ಡ್ ನಂ.51, ವಿಜಿನಾಪುರ

Scanned with CamScanner